# ವೇತನ ನೀತಿ ಮತ್ತು ಅಭಿವೃದ್ಧಿಯ ಪ್ರಶ್ನೆ *

ಅರ್ಥಶಾಸ್ತ್ರದ ಪ್ರಸ್ತುತ ಪರಿಭಾಷೆಯಲ್ಲಿ ತನ್ನೆಲ್ಲ ವೈವಿಧ್ಯತೆಯಲ್ಲೂ ಅತಿ ಹೆಚ್ಚು ಉಪಯೋಗಿಸಲ್ಪಟ್ಟಿರುವ-ಅಥವಾ ನಿಮಗೆ ಬೇಕಿದ್ದರೆ, ದುರುಪಯೋಗಿಸಲ್ಪಟ್ಟಿರುವ–ಪದವೆಂದರೆ ಅಭಿವೃದ್ಧಿ. ಹಿಂದುಳಿದ ರಾಷ್ಟ್ರಗಳಲ್ಲಿನ ಅಭಿವೃದ್ಧಿಯ ಸಮಸ್ಯೆ ಮತ್ತು ಹೀಗೆ ಹಿಂದುಳಿದಿರುವುದರ ಲಕ್ಷಣಗಳನ್ನು ಕುರಿತಂತೆ ಪದಪುಂಜಗಳ ರಾಶಿಯೇ ಬೆಳೆದಿದೆ. ಈ ಪದರಾಶಿಯು ಹಿಂದುಳಿದ ದೇಶಗಳು ತಮ್ಮ ಆದ್ಯಾವಸ್ಥೆಗಳಿಂದ ಆಧುನಿಕ ಸಮಾಜವೊಂದರತ್ತ ಸ್ಥಿತ್ಯಂತರ ಹೊಂದುತ್ತಿರುವುದರ ಸುತ್ತಲೇ ಬೆಳೆಯುತ್ತಿದೆ. ಜನರ ನಿಜವಾದ ಸಮಸ್ಯೆಗಳನ್ನು ಪಾಂಡಿತ್ಯದ ಜಂಭದಲ್ಲಿ ಮುಚ್ಚಿ ಈ ಸ್ಥಿತ್ಯಂತರವನ್ನು ಸೂಚಿಸಲು ಮತ್ತು ವಿವರಿಸಲು ಆಧುನೀಕರಣ, ಔದ್ಯಮೀಕರಣ, ಪಶ್ಚಿಮೀಕರಣ, ಅಭಿವೃದ್ಧಿ ಮುಂತಾದ ಶಬ್ದಜಾಲವನ್ನು ಅನರ್ಥವಾಗಿ ಉಪಯೋಗಿಸಲಾಗುತ್ತಿದೆ. ಕಳೆದೆರಡು ಶತಮಾನಗಳಲ್ಲಿ ವಸ್ತುನಿಷ್ಠ ಸಾಮಾಜಿಕ ನಿಯಮಗಳಿಂದಲೋ ಚರಿತ್ರೆಯ ಖಯಾಲಿಯಿಂದಲೋ ಪಶ್ಚಿಮ ದೇಶಗಳಲ್ಲಿ ಒಂದು ಹೊಸ ನಾಗರಿಕತೆ ಸೃಷ್ಟಿಯಾಗಿದೆ. ಈ ನಾಗರಿಕತೆಗಳಲ್ಲಿ ವೈಜ್ಞಾನಿಕ ಅನ್ವೇಷಣೆಯ ತುಡಿತ ಮತ್ತು ಆಧುನಿಕ ತಾಂತ್ರಿಕತೆಯ ಧೋರಣೆಗಳು ಮೂಡಿ ಅವುಗಳಿಂದಾಗಿ ಆರ್ಥಿಕ, ರಾಜಕೀಯ ಚೌಕಟ್ಟಿನಲ್ಲಿ ಅನೇಕ ಸಾಂಸ್ಥಿಕ ಬದಲಾವಣೆಗಳುಂಟಾಗಿವೆ. ಪಾಶ್ಚಿಮಾತ್ಯ ದೇಶಗಳಲ್ಲಿ ಈ ಹೊಸ ವ್ಯವಸ್ಥೆ ಮೊದಲು ಸೃಷ್ಟಿಯಾಗಿದ್ದು ಅವುಗಳ ಸೌಲಭ್ಯಗಳು ನಿಸ್ಸಂಶಯವಾಗಿ ಅಪಾರವಾಗಿರುವುದು ಈ ನಾಗರಿಕತೆಯನ್ನು ವಿಶ್ವಮಾದರಿಯನ್ನಾಗಿಸಿವೆ. ಎಲ್ಲ ಹಿಂದುಳಿದ ದೇಶಗಳೂ ಈ ವಿಶ್ವ ಮಾದರಿಯನ್ನನುಸರಿಸಬೇಕು ಎಂದು ಹೇಳಲಾಗುತ್ತಿದೆ, ಮತ್ತು ಎಲ್ಲ ಹಿಂದುಳಿದ ದೇಶಗಳೂ ತಮ್ಮ ಅಭಿವೃದ್ಧಿಗೆ ಈ ಮಾದರಿಯ ನೀಲ ನಕ್ಷೆಯನ್ನು ಅನುಸರಿಸಿವೆ.

ಹಿಂದುಳಿದ ದೇಶಗಳ ಅಭಿವೃದ್ಧಿಯ ಲಾಭನಷ್ಟದ ವಿವರವಾದರೂ ಏನು? ಇತ್ತೀಚೆಗೆ ತಜ್ಞರ ತಂಡ 21 ನೇ ಶತಮಾನದಲ್ಲಿ ಜಗತ್ತಿನ ಪರಿಸ್ಥಿತಿ ಏನಾದೀತು ಎಂಬುದನ್ನು ಕುರಿತು ಅಮೇರಿಕಾದ ಅಧ್ಯಕ್ಷರಿಗೆ ಸಲ್ಲಿಸಲಾದ ವರದಿಯಲ್ಲಿ ಹೀಗೆ ಹೇಳಲಾಗಿದೆ :

> " 1975 ರಲ್ಲಿ ಜಗತ್ತಿನ ಜನಸಂಖ್ಯೆ 4 ಬಿಲಿಯನ್ ಇದ್ದದ್ದು ಕ್ರಿ. ಶ. 2000 ದ ಹೊತ್ತಿಗೆ 6.35 ಬಿಲಿಯನ್ ಆಗಿರುತ್ತದೆ ಎಂದು ಲೆಕ್ಕ ಹಾಕ

---

* ಖಂಡಾಲದಲ್ಲಿ ಅಖಿಲ ಭಾರತ ಜೀವವಿಮಾ ಉದ್ಯೋಗಿಗಳ ಸಂಘದ ಕಾರ್ಮಿಕರ ಅಧ್ಯಯನ ಶಿಬಿರದಲ್ಲಿ 10 ಆಗಸ್ಟ್ 1980ರಂದು ಮಂಡಿಸಿದ ಲೇಖನದ ಕನ್ನಡಾನುವಾದ.

ಬಹುದು. ಈ ಬೆಳವಣಿಗೆಯು ಬಹುಪಾಲು ಅಭಿವೃದ್ಧಿ ಹೊಂದಿರದ ಬಡದೇಶಗಳಲ್ಲೇ ನಡೆದಿರುತ್ತದೆ. ಮುಖ್ಯವಾಗಿ ಈ ದೇಶಗಳ ನಗರಗಳು ಮತ್ತು ಊರುಗಳ ಜನಸಂಖ್ಯೆ ಹೆಚ್ಚಾಗುತ್ತದೆ. ಕಲ್ಕತ್ತೆಯಲ್ಲಿ ಸುಮಾರು 20ಮಿಲಿಯನ್ ಜನ ತುಂಬಿರುತ್ತಾರೆ ಮತ್ತು ಮುಂಬೈಯಲ್ಲಿ 15 ಮಿಲಿಯನ್ ಜನ ರಾಶಿಯಾಗಿರುತ್ತಾರೆ." ಹಾಗಿದ್ದರೂ, ಮಾಲ್ತೂಸನ ಭಯಂಕರ ಕೊಕ್ಕೆಯೊಂದನ್ನು ಒಳಗೊಂಡು ಈ ಅಧ್ಯಯನ ಮುಂದುವರಿದು ಹೀಗೆ ಹೇಳುತ್ತದೆ.—

"ಮುಂಬರುವ ವರ್ಷಗಳಲ್ಲಿ ನಗರದ ಬಡವರಿಗೆ ಉಂಟಾಗುವ ಆಹಾರದ ಅಭಾವ ನಿರುದ್ಯೋಗ, ದಿನೇ ದಿನೇ ಹೆಚ್ಚುತ್ತಿರುವ ರೋಗಗಳು ಮತ್ತು ಸಂಕಷ್ಟಗಳಿಂದ ಈ ಜನಸಂಖ್ಯಾ ಸ್ಫೋಟ ಮಿತಿಗೊಳ್ಳಬಹುದು.

"ಆಹಾರ, ಉತ್ಪಾದನೆ 1970ರ ಮಟ್ಟಿಗೆ ಶೇ. 90ರಷ್ಟು ಮುಂದಿನ 20 ವರ್ಷಗಳಲ್ಲಿ ಹೆಚ್ಚಾಗಬಹುದು. ಹೀಗಾಗುವುದಕ್ಕೆ ಹವಾಗುಣ ಅವಕಾಶವಿತ್ತರೆ. ಈ ಉತ್ಪಾದನೆಯು ಹೆಚ್ಚಳ ಈಗಾಗಲೇ ತುಂಬಿದ ಹೊಟ್ಟೆಯ ದೇಶಗಳಲ್ಲಿ ಮಾತ್ರ, ಅಂದರೆ ಮೂರನೇ ಜಗತ್ತಿನಲ್ಲಿ ಭೀಕರ ಉತ್ಪಾತಗಳನ್ನು ಉಂಟು ಮಾಡುವ ಅಭಾವಗಳು ಸೃಷ್ಟಿಯಾಗಿ ಈ ದೇಶಗಳು ಔದ್ಯಮೀಕೃತ ದೇಶಗಳಿಗಿಂತ ಒಟ್ಟು ರಾಷ್ಟ್ರೀಯ ವರಮಾನದ ಗಳಿಕೆಯಲ್ಲಿ ಇನ್ನೂ ಹಿಂದೆ ಬೀಳುತ್ತವೆ. (ಈಗ ಸಂಯುಕ್ತ ಸಂಸ್ಥಾನದ ಒಟ್ಟು ರಾಷ್ಟ್ರೀಯ ವರಮಾನ ಡಾ. 4375, ಹಿಂದುಳಿದ ದೇಶಗಳದ್ದು ಡಾ. 382 ಇದ್ದರೆ, ಕ್ರಿಶ 3000ದಲ್ಲಿ ಸಂಯುಕ್ತ ಸಂಸ್ಥಾನದ ಒಟ್ಟು ರಾಷ್ಟ್ರೀಯ ವರಮಾನ ಡಾ 8485 ಹಿಂದುಳಿದ ದೇಶಗಳದ್ದು ಡಾ. 587—ಟೈಂಸ್‌ವೀಕ್ಲಿ ಆಗಸ್ಟ್ 4 1980)

ನಾವು ಅಭಿವೃದ್ಧಿ ಯೋಜನೆಗಳ ಬೆನ್ನು ಹತ್ತಿದರೂ ಅಥವಾ ಬಹುಶಃ ಅವುಗಳಿಂದಲೆ, ಇಂಡಿಯ ಕೂಡ ಕ್ರಿಶ. 2000ದಲ್ಲಿನ ಈ ಎಲ್ಲ ಉತ್ಪಾತಗಳಿಗೂ ಗುರಿಯಾಗುವುದು ಖಂಡಿತ. ಈಗಿರುವ ಅಂಕಿ ಅಂಶಗಳು ಕೂಡ ಇದನ್ನು ಖಚಿತ ಪಡಿಸುತ್ತವೆ. ನಾನು ಕೆಲವು ತಕ್ಷಣಕ್ಕೆ ಸಿಗುವ ಅಂಕಿ ಅಂಶಗಳಿಂದ ಈ ಸ್ಥಿತಿಯುಂಟಾಗುವ ಸಾಧ್ಯತೆಯನ್ನು ತೋರಿಸುತ್ತೇನೆ. ಇಂಡಿಯ ಈಗಾಗಲೇ ನಾಲ್ಕು ಪಂಚವಾರ್ಷಿಕ ಯೋಜನೆಗಳನ್ನು, ಮೂರು ವಾರ್ಷಿಕ ಯೋಜನೆಗಳ ಹಾಗೂ ಐದನೆಯ ಯೋಜನೆಯ ನಾಲ್ಕು ವರ್ಷಗಳನ್ನು ಕ್ರಮಿಸಿದೆ. ಇದುವರೆಗೆ ಸುಮಾರು ಒಂದು ಲಕ್ಷ ಹದಿನೈದು ಸಾವಿರ ಕೋಟಿ ರೂಪಾಯಿಗಳನ್ನು ಯೋಜಿತ ಅಭಿವೃದ್ಧಿಗೆ ವೆಚ್ಚ ಮಾಡಲಾಗಿದೆ. ಅಭಿವೃದ್ಧಿ ಎಂಬ ಪದವನ್ನು ದೀಕ್ಷೆಯ ಮಂತ್ರದಂತೆ ಜಪಿಸುತ್ತಲೇ ಇದ್ದೇವೆ. ಇವುಗಳ ಪರಿಣಾಮ ಏನೆಂಬುದನ್ನು ಗಮನಿಸೋಣ : ಪಂಚವಾರ್ಷಿಕ ಯೋಜನೆಗಳು

ಪ್ರಾರಂಭವಾದಾಗ ಹತ್ತು ಮಿಲಿಯನ್ ಜನ ನಿರುದ್ಯೋಗಿಗಳಿದ್ದರು. ಈಗ ಒಂದು ಲೆಕ್ಕಾಚಾರದಂತೆ ನಲವತ್ತು ಮಿಲಿಯನ್ ಜನ ನಿರುದ್ಯೋಗಿಗಳಿದ್ದಾರೆ. ಉದ್ಯೋಗ ವಿನಿಮಯ ಕೇಂದ್ರಗಳ ನೋಂದಣಿ ಪಟ್ಟಿಯಲ್ಲಿ 1951ರಲ್ಲಿ 1.8 ಮಿಲಿಯನ್ ಜನ ನಿರುದ್ಯೋಗಿ ಮತ್ತು ಅರೆ ಉದ್ಯೋಗಿಗಳಿದ್ದರೆ. 1979ರಲ್ಲಿ 13.9 ಮಿಲಿಯನ್ ಜನ ಇದ್ದಾರೆ. ಯೋಜನೆಗಳು ಪ್ರಾರಂಭವಾದಾಗ 298 ಮಿಲಿಯನ್ ನಿರಕ್ಷರಿಗಳಿದ್ದರು. ಈಗ ಸುಮಾರು 420ಮಿಲಿಯನ್ ನಿರಕ್ಷರಿಗಳಿದ್ದಾರೆ. ಅಕ್ಷರಸ್ಥರ ಸಂಖ್ಯೆಯ ಶೇಕಡಾ ವಾರು ಹೆಚ್ಚಾಗಿದ್ದರೂ (1951ರಲ್ಲಿ 16.6% ಇದ್ದದ್ದು 1979ರಲ್ಲಿ 29.3%ಗೆ ಏರಿದೆ) ಕೂಡ. ಮನೆಗಳ ಕೊರತೆ 1974ರಲ್ಲಿ 75.6 ಮಿಲಿಯನ್ ಇದ್ದದ್ದು 1979ರ ಹೊತ್ತಿಗೆ 19.7 ಮಿಲಿಯನ್ ಆಗಿದೆ. ಬಡತನದ ರೇಖೆಯ ಕೆಳಗೆ 1960–61ರಲ್ಲಿ 235 ಮಿಲಿಯನ್ ಜನರಿದ್ದು, 1977–78ರಲ್ಲಿ ಇವರ ಸಂಖ್ಯೆ 290 ಮಿಲಿಯನ್ ಆಗಿದೆ. 1950–51ರಲ್ಲಿ 31 ಮಿಲಿಯನ್ ಕಡುಬಡವರು ಇದ್ದರೆ ಈಗ 70 ಮಿಲಿಯನ್ ಜನ ಕಡುಬಡವರು. ನಿರುದ್ಯೋಗಿಗಳ, ಅನಕ್ಷರಸ್ಥರ ಮತ್ತು ಮನೆಗಳ ಸಂಖ್ಯೆಯ ಈ ಅಂಕಿ ಅಂಶಗಳ ಕುಪ್ರಸಿದ್ಧ ಅಧಿಕಾರಶಾಹಿಯ ಕೆಳ ಅಂದಾಜು ಮತ್ತು ಊಹೆಗಳಿಂದ ಹುಟ್ಟಿಕೊಂಡವು. ಈ ಯೋಜನಾ ಪರಿಷ್ಕರ ನಿರ್ಲಿಪ್ತತೆ ಎಷ್ಟಿದೆ ಎಂದರೆ ಅವರ ಬಳಿಯಿರುವ ಅಪಾರ ಅಧಿಕಾರ ಮತ್ತು ಸೌಲಭ್ಯಗಳನ್ನು ಉಪಯೋಗಿಸಿಕೊಂಡೂ ಜನರ ಕನಿಷ್ಠ ಅಗತ್ಯಗಳನ್ನು ನಿಖರವಾಗಿ ಅಂದಾಜು ಮಾಡುವುದೂ ಸಹ ಅವರಿಗೆ ಸಾಧ್ಯವಾಗಿಲ್ಲ. ಹೆಚ್ಚು ಹೆಚ್ಚು ಜನ ಬಡತನದ ರೇಖೆಯ ಕೆಳಗೆ ದಿನೇದಿನೇ ದೂಡಲ್ಪಡುತ್ತಿದ್ದಾರೆ. ಹಳ್ಳಿಯ ಕರಕುಶಲಿಗರು ಹಾಗೂ ರೈತರ ಒಂದು ದೊಡ್ಡ ದಂಡೇ ಜಮೀನು ಕಳೆದುಕೊಂಡು ಪಾಪರೆದ್ದು ಹೋಗಿರುವ ಕೃಷಿಕಾರ್ಮಿಕರ ಮಧ್ಯೆ ತಾನೂ ಮುಳುಗಿ ಹೋಗುತ್ತಿದೆ. ಕೃಷಿಕರ ಸಂಖ್ಯೆ 99.6 ಮಿಲಿಯನ್‌ನಿಂದ 78.2 ಮಿಲಿಯನ್‌ಗೆ ಇಳಿದಿದೆ. (ಅಂದರೆ ನಮ್ಮ ಒಟ್ಟು ಜನಸಂಖ್ಯೆಯ ಶೇ. 52.8 ರಿಂದ ಶೇ. 43.4ಕ್ಕೆ ಕುಸಿದಿದೆ.) ಆದರೆ ಕೃಷಿಕಾರ್ಮಿಕರ ಸಂಖ್ಯೆ 31.5 ಮಿಲಿಯನ್‌ನಿಂದ 47.5 ಮಿಲಿಯನ್ (ಅಂದರೆ ಒಟ್ಟು ಜನಸಂಖ್ಯೆಯ ಶೇ. 16.7 ರಿಂದ ಶೇ. 26.3ಕ್ಕೆ) ಏರಿದೆ. ಈ ವ್ಯತ್ಯಾಸಗಳು 1961 ರಿಂದ 1971ರ ವರೆಗಿನ ಅವಧಿಯಲ್ಲಿ ಉಂಟಾದವು. ಈ ಅಂಕಿ ಸಂಖ್ಯೆಗಳು ಖಚಿತ ಪಡಿಸುವ ಅಂಶವಿದು : ಅಲಂಕಾರಿಕ ಮಾತುಗಳು ಏನೇ ಇದ್ದರೂ ನಮ್ಮ ಯೋಜಿತ ಅಭಿವೃದ್ಧಿಯಿಂದ ಈ ಕಂದರಗಳನ್ನು ಮುಚ್ಚಲು ಸಾಧ್ಯವಿಲ್ಲ.

ಈಗ ಮತ್ತೊಂದು ಅಂಕಿ ಅಂಶಗಳನ್ನು ನೋಡಿ !

| ರಾಷ್ಟ್ರಗಳ ಹೆಸರುಗಳು | ಒಟ್ಟು ರಾಷ್ಟ್ರೀಯ ವರಮಾನ ಸಂ. ಸ. ಡಾಲರ್ಸ್ | ಆಹಾರ ಕೆಲೋರಿ | ಪ್ರೋಟೀನ್ ಗ್ರಾಂಗಳಲ್ಲಿ | ಧಾನ್ಯಗಳು ಗ್ರಾಂ | ಸಕ್ಕರೆ ಗ್ರಾಂ | ಹಾಲು ಗ್ರಾಂ | ಕೊಬ್ಬು ಗ್ರಾಂ | ಶಕ್ತಿ | ಉಕ್ಕು ಕೆ.ಜಿ. | ನ್ಯೂಸ್ ಪ್ರಿಂಟ್ ಕೆ.ಜಿ.ಗಳಲ್ಲಿ |
|---|---|---|---|---|---|---|---|---|---|---|
| ಇಂಡಿಯಾ | 150 ಡಾಲರ್ಸ್ | 1968 | 49 | 384 | 49 | 116 | 21 | 218 | 13 | 0.3 |
| ಚೈನಾ | 410 ಡಾಲರ್ಸ್ | 2278 | 62 | 387 | 10 | 9 | 33 | 706 | 32 | 1.3 |
| ಅಮೇರಿಕಾ | 8640 ಡಾಲರ್ಸ್ | 3537 | 105 | 176 | 140 | 688 | 168 | 11,554 | 604 | 41.5 |
| ರಷ್ಯಾ | 3010 ಡಾಲರ್ಸ್ | 3474 | 104 | 428 | 106 | 476 | 102 | 5,250 | 507 | 4.4 |

ಎರಡು ತೀರ್ಮಾನಗಳು ಇದರಿಂದ ಉಂಟಾಗುತ್ತವೆ. ಮೊದಲನೆಯದು ಎರಡು ಅಭಿವೃದ್ಧಿ ಹೊಂದಿದ ದೊಡ್ಡ ದೇಶಗಳು ಮತ್ತು ಎರಡು ಅಭಿವೃದ್ಧಿ ಹೊಂದುತ್ತಿರುವ ದೊಡ್ಡ ದೇಶಗಳ ನಡುವೆ ಮುಚ್ಚಲಾಗದ ಕಂದಕವಿದೆ. ಎರಡನೆಯದು ಇಂಡಿಯಾ ಮತ್ತು ಚೈನಾ, ಸುಮಾರು 30 ವರ್ಷಗಳ ಹಿಂದೆ ಒಟ್ಟಿಗೆ ಅಭಿವೃದ್ಧಿಯೆಡೆಗೆ ನಡೆಯಲಾರಂಭಿಸಿದ್ದರೂ ಈಗ ಅವರೆಡೂ ದೇಶಗಳ ಸಾಧನೆ ಮತ್ತು ಆದ್ಯತೆಗಳಲ್ಲಿ ಎದ್ದು ಕಾಣುವ ಅಂತರವಿದೆ. ಹಾಗೆ ನೋಡಿದರೆ, ಈ ರೇಸು ಮೊದಲಾದಾಗ ಇಂಡಿಯಾ ಸ್ವಲ್ಪ ಮುಂದಿತ್ತು. ಅಲ್ಲದೆ ಕೆಲವು ಸೌಲಭ್ಯಗಳನ್ನೂ ಹೊಂದಿತ್ತು. ಈ ಎರಡೂ ದೇಶಗಳಲ್ಲಿನ ಆಹಾರ ಕೆಲೋರಿಗಳ ಬಳಕೆ, ಕೊಬ್ಬು ಮತ್ತು ಪ್ರೊಟೀನ್‌ಗಳ ಉಪಯೋಗ ಇವು ಹೆಚ್ಚು ಕಡಿಮೆ ಒಂದೇ ರೀತಿ ಇದೆ. ಆದರೆ, ಚೈನಾ ಸಕ್ಕರೆ, ಹಾಲಿನ ಉಪಯೋಗದಲ್ಲಿ ಭಾರತಕ್ಕಿಂತ ಬಹಳ ಹಿಂದಿದೆ. ಆದರೆ ಉಕ್ಕು, ನ್ಯೂಸ್ ಪ್ರಿಂಟ್ ಮತ್ತು ಶಕ್ತಿಯ ತಲಾ ಬಳಕೆಯಲ್ಲಿ ಮತ್ತು ತಲಾ ವರಮಾನದಲ್ಲಿ ಭಾರತವನ್ನು ಹಿಂದೂಡಿದೆ. ಅಂದರೆ, ಸಕ್ಕರೆ ಮತ್ತು ಹಾಲಿನ ಉತ್ಪಾದನೆಗೆ ಚೈನಾ ಆದ್ಯತೆನೀಡಿಲ್ಲ. ಬಹುಶಃ ಇವುಗಳ ಉತ್ಪಾದನೆಯನ್ನು ಮುಂದೂಡಿದೆ. ಆದರೆ ಚೈನಾ ಆಹಾರ ಕೆಲೋರಿಗಳು ಕೊಬ್ಬು ಮತ್ತು ಪ್ರೊಟೀನ್‌ಗಳ ಬಳಕೆಯನ್ನು ತನ್ನ ಅಭಿವೃದ್ಧಿ ತಂತ್ರದ ಚೌಕಟ್ಟಿನ ಭಾಗವಾಗಿಯೇ ಪರಿಗಣಿಸಿದೆ. ಇವುಗಳಲ್ಲದೆ ಚೈನಾ ಗೌರವಾರ್ಹ ಕೂಲಿದರಗಳನ್ನು ಕೊಟ್ಟು ನಿರುದ್ಯೋಗವನ್ನು ನಿರ್ಮೂಲ ಮಾಡಿದೆ. ನಿರಕ್ಷರತೆಯನ್ನು ಕೂಡ ತೊಡೆದು ಹಾಕಿದೆ. ಆದರೆ, ಇಲ್ಲಿ ಗುಣಮಟ್ಟವನ್ನು ಬಹುಶಃ ಕಳೆದುಕೊಂಡಿರಬಹುದು. ಇಂಡಿಯ ಎರಡೂ ರೀತಿಯಲ್ಲಿ ಕಳೆದು ಕೊಂಡಿದೆ. ಅದು ಸಕ್ಕರೆ ಮತ್ತು ಹಾಲಿನ ತಕ್ಷಣದ ಬಳಕೆಯನ್ನು ನಿರ್ಮಿಸಿಲ್ಲ ಅಥವಾ ಸಂಪೂರ್ಣ ಉದ್ಯೋಗ, ಸಂಪೂರ್ಣ ಸಾಕ್ಷರತೆ, ಉಕ್ಕು, ಶಕ್ತಿ ಮತ್ತು ನ್ಯೂಸ್‌ಪ್ರಿಂಟ್‌ಗಳ ವಿಶೇಷ ಉತ್ಪಾದನೆಯೇನೂ ಸಾಧಿಸಿಲ್ಲ. ಅಂದರೆ,ಇಂಡಿಯ ಮತ್ತು ಅಭಿವೃದ್ಧ ದೇಶಗಳ ನಡುವಿನ ಕಂದಕವಷ್ಟೇ ಅಲ್ಲ, ಇಂಡಿಯ ಮತ್ತು ಚೈನಾದ ನಡುವಿನ ಕಂದರ ಸಹ ಅಗಲವಾಗುತ್ತಲೇ ಹೋಗುತ್ತದೆ.

ನಮ್ಮ ಯೋಜನೆಗಳ ಗುರಿ : ನಿರುದ್ಯೋಗ, ಅನಕ್ಷರತೆ ಮತ್ತು ಮೂಲಭೂತ ಬೇಡಿಕೆಗಳ ಕೊರತೆಯ ನಿವಾರಣೆಯಾಗಿದ್ದರೆ, ಭಾರತದ ಯೋಜನೆಗಳು ಸಂಪೂರ್ಣವಾಗಿ ವಿಫಲವಾಗಿದೆ ಎನ್ನುವುದು ಮೇಲಿನ ಅಂಕಿ—ಅಂಶಗಳಿಂದ ಸ್ಪಷ್ಟವಾಗಬೇಕು. ಜಗತ್ತಿನ ಔದ್ಯಮೀಕೃತ ದೇಶಗಳಲ್ಲಿ ಭಾರತಕ್ಕೆ ಹತ್ತನೇ ಸ್ಥಾನ ತನ್ನ ಅಪಾರ ವಿಸ್ತಾರದಿಂದ ದೊರಕಿದೆ.ಅದು ಆದರೆ ತಲಾ ರಾಷ್ಟ್ರೀಯ ಆದಾಯದ ಮಾನದಂಡದಲ್ಲಿ ಎಲ್ಲೋ ತೊಂಬತ್ತರ ಆಚೆಯ ಸ್ಥಾನದಲ್ಲಿ ಕೂತಿದೆ. ನಮ್ಮ ಅಭಿವೃದ್ಧಿ ತಂತ್ರದಲ್ಲಿ ಕ್ರಾಂತಿಕಾರಕ ಬದಲಾವಣೆಗಳಾಗದಿದ್ದರೆ, ಭಾರತ ಇನ್ನೂ ನಾಲ್ಕು ಪಂಚವಾರ್ಷಿಕ ಯೋಜನೆಗಳ ಮೂಲಕ ತನ್ನ ಸರ್ವ ನಾಶದತ್ತ ಧಾವಂತದಿಂದ ಸಾಗುವುದರಲ್ಲಿ ಸಂಶಯವಿಲ್ಲ. ಈಗಿನ ಆದ್ಯತೆಗಳು ವಿಕೃತವಾಗಿವೆ. ತಲಾ ರಾಷ್ಟ್ರೀಯ ಉತ್ಪಾದನೆಯಲ್ಲಿ ಒಂದು

ತೊಟ್ಟು ಹೆಚ್ಚಳವನ್ನು ಯೋಜಿಸಲಾಗಿದೆ ; ಕನಿಷ್ಠ ಅಗತ್ಯಗಳಾದ ಆಹಾರ, ನೀರು, ಮನೆ, ಬಟ್ಟೆ. ಆರೋಗ್ಯ, ಅಕ್ಷರಜ್ಞಾನ ಮತ್ತು ದೇಶದ ಮಿಲಿಯಂಗಟ್ಟಲೆ ಜನರಿಗೂ ಒಂದೊಂದು ಕೆಲಸ, ಇವುಗಳ ಬಗ್ಗೆ ಈ ಯೋಜನೆಗಳಲ್ಲಿ ಯಾವ ಗ್ಯಾರಂಟಿಯೂ ಇಲ್ಲ. ಮತ್ತೊಂದು ಗಮನಾರ್ಹ ಅಂಶವಿದು. ಈ ಅಂಕಿ ಅಂಶಗಳಲ್ಲಿ ಪರಿಶೀಲಿಸಲಾಗಿರುವ ಸರಾಸರಿಗಳು ಉಗ್ರ ಅಸಮಾನತೆಯನ್ನು ಮುಚ್ಚಿಹಾಕಿದೆ. 1968 ಕ್ಯಾಲರಿ ಆಹಾರ 49ಗ್ರಾಂ ಪ್ರೋಟೀನು ಅಥವಾ 29ಗ್ರಾಂ ಕೊಬ್ಬು ಮುಂತಾದ ಸರಾಸರಿ ಬಳಕೆ. ಒಂದು ಕಡೆ, ಅಸಂಖ್ಯ ಜನಕೋಟಿಯ ಕಟ್ಟುಪವಾಸವನ್ನೂ, ಮತ್ತೊಂದು ಕಡೆಯ ಕೆಲವು ಜನರ ಹೊಟ್ಟೆ ಬಾಕತನವನ್ನು ಸಮೀಕರಿಸಿದ್ದು.

ನಮ್ಮ ಕೃಷಿಕಾರ್ಮಿಕರ ಮಕ್ಕಳ ಪೈಕಿ ಶೇ. 75 ಜನ ಶಾಲೆಗಳಿಗೆ ಹೋಗುವುದಿಲ್ಲ. ಆದರೆ ನಮ್ಮ ದೇಶದ ಪ್ರಾಥಮಿಕ ಶಾಲೆಗಳಲ್ಲಿ ವಿದ್ಯಾರ್ಥಿಗಳ ನೋಂದಣಿ ಸಂಖ್ಯೆ ಶೇ. 83.9. ತಲಾ ಆದಾಯದ ಸರಾಸರಿ ಒಂದು ತುದಿಯಲ್ಲಿ ದಿನಕ್ಕೆ ಸಾವಿರಗಟ್ಟಲೆ ರೂಪಾಯಿಗಳ ಆದಾಯವಿರುವ ಕೆಲವೇ ಕುಟುಂಬಗಳು ಮತ್ತು ದಿನಕ್ಕೆ ಮೂರು ಅಥವಾ ನಾಲ್ಕು ರೂಪಾಯಿ ಕೂಲಿಯ ಕೃಷಿಕಾರ್ಮಿಕರ ದಂಡುಗಳ ನಡುವೆ ಇರುವ ವ್ಯತ್ಯಾಸಗಳನ್ನು ಎತ್ತಿ ತೋರಿಸದೆ ಅಡಗಿಸಿ ಬಿಡುತ್ತದೆ. ನಮ್ಮ ದೇಶದ ಬಡಜನಗಳಲ್ಲಿ ಬಹಳಷ್ಟು ಜನಗಳಿಗೆ ಇಂಡಿಯಾದ ಜೈಲುಗಳಲ್ಲಿರುವ ಕನಿಷ್ಠ ದರ್ಜೆಯ ಖೈದಿಗಳಿಗೆ ದೊರಕುವ ಕನಿಷ್ಠ ಆಹಾರ ಕೂಡ ದೊರಕುವುದಿಲ್ಲ.

ಆದ್ದರಿಂದ ನಾವುಗಳು ತೀರ್ಮಾನಿಸಬಹುದಾದದ್ದು ಏನೆಂದರೆ, ಇಲ್ಲಿ ಆಗುತ್ತಿರುವ ಅಭಿವೃದ್ಧಿ ಒಂದು ಬಂಡವಾಳಶಾಹಿ ಆರ್ಥಿಕ ಮಾರುಕಟ್ಟೆಯ ಅಭಿವೃದ್ಧಿಯೇ ಆಗಿದೆ. ಈ ಅಭಿವೃದ್ಧಿಯಿಂದಾಗಿ ಕೆಲವೇ ಜನ ಭೂಮಾಲಿಕರು ಮತ್ತು ಬಂಡವಾಳಗಾರರು ಲಾಭ ಮತ್ತು ಸೌಲಭ್ಯಗಳನ್ನು ಪಡೆದುಕೊಳ್ಳುತ್ತಿದ್ದಂತೆ ಹಿಂಡು ಹಿಂಡು ಜನಗಳಿಗೆ ಹೆಚ್ಚು ಹೆಚ್ಚು ದುಃಖ, ಸಂಕಷ್ಟ ಇತ್ಯಾದಿಗಳು ಉಂಟಾಗುತ್ತಿವೆ. ಈ ಅಭಿವೃದ್ಧಿಯಲ್ಲಿ ಜನರ ಕನಿಷ್ಠ ಬೇಡಿಕೆಗಳಾದ ಉದ್ಯೋಗ. ಆಹಾರ, ಶಿಕ್ಷಣ, ಮನೆ ಇತ್ಯಾದಿಗಳು ಉಪಲಬ್ಧಗಳಷ್ಟೆ; ಈ ಅಭಿವೃದ್ಧಿ ಕ್ರಮದಿಂದ ಯೋಜಿತ ಗುರಿಗಳನ್ನು ಮುಟ್ಟಲು ಸಾಧ್ಯವಿಲ್ಲ. ಯಾವ ರೀತಿಯ ಜನರಂಜನೆಯ ಭಾಷಣಗಳೂ ಕೂಡ ಈ ಮೂಲಭೂತ ಪರಿಸ್ಥಿತಿಯನ್ನು ಬದಲಿಸಲು ಸಾಧ್ಯವಿಲ್ಲ. ಒಂದು ಹೊಸದಾದ ಬದಲಿ ಅಭಿವೃದ್ಧಿ ಮಾದರಿಯನ್ನು ನಾವು ಕೈಗೆತ್ತಿಕೊಳ್ಳಬೇಕು. ಈ ಮಾದರಿಯ ಗುರಿ ಸಂಪೂರ್ಣ ಉದ್ಯೋಗ ಮತ್ತು ಜನಗಳ ಕನಿಷ್ಠ ಬೇಡಿಕೆಗಳ ನೇರ ಪೂರೈಕೆ ಆಗಿರಬೇಕು ಈಗ ಒಪ್ಪಿಕೊಳ್ಳಲಾಗಿರುವ ಅನೇಕ ರೀತಿಯ ಅಭಿವೃದ್ಧಿಯ ಕಂದಾಚಾರದ ನಂಬಿಕೆಗಳನ್ನು ಕೈಬಿಡುವುದು ಇದರಿಂದಾಗಿ ಅನಿವಾರ್ಯವಾಗಬಹುದು ಮತ್ತು ಭೂತದಿಂದ ಕ್ರಾಂತಿಕಾರಕ ರೀತಿಯಲ್ಲಿ ನಾವು ಬಿಡಿಸಿಕೊಳ್ಳಬೇಕು.

ಇಂಥ ಪರಿಸ್ಥಿತಿಯಲ್ಲಿ ಇಂಡಿಯಾದಲ್ಲಿ ಕಾರ್ಮಿಕರು ಉತ್ಪಾದನೆಯ ಒಂದು ಅಂಶ ಮಾತ್ರ ಆಗಲು ಸಾಧ್ಯ. ಮತ್ತು ಈಗ ಅವರು ಆಗಿರುವುದೂ ಅಷ್ಟು ಮಾತ್ರ.

ಯಾರು ಕೂಡ ಕಾರ್ಮಿಕರನ್ನು ಯೋಜಿತ ರಾಷ್ಟ್ರೀಯ ಅಭಿವೃದ್ಧಿಗೆ ಅವರು ಏನನ್ನು ನೀಡಬಲ್ಲರು ಎಂದು ಕೇಳುತ್ತಿಲ್ಲ. ಅಲ್ಲದೆ ಪರಿಸ್ಥಿತಿ ಈಗಿರುವಂತೆ ಅವರು ಏನೂ ಗಮನಾರ್ಹವಾದದ್ದನ್ನು ಮಾಡಲು ಕೂಡ ಸಾಧ್ಯವಿಲ್ಲ, ಯೋಜನೆಗಳನ್ನು ನಿರೂಪಿಸುವ ಯಾಂತ್ರಿಕ ಕ್ರಿಯೆಯಲ್ಲಿ ಆಳುವ ಪಕ್ಷದ ಬಾಲಂಗೋಸಿಯಾದ ಐ. ಎನ್. ಟಿ. ಯು. ಸಿ ಯಂಥ ಕಾರ್ಮಿಕ ಸಂಘಟನೆಯನ್ನು ಕೂಡ ಗಮನಕ್ಕೆ ತೆಗೆದುಕೊಳ್ಳುವುದಿಲ್ಲ. ಅಭಿವೃದ್ಧಿಯ ಕ್ರಿಯೆಯಲ್ಲಿ ಕಾರ್ಮಿಕರೂ ಕೂಡ ಪಾಲುದಾರರು ಎಂದು ಪರಿಗಣಿಸಿದಲ್ಲಿ ರಚನಾತ್ಮಕ ಸಲಹೆಗಳ ಒಂದು ವರ್ಣಸ್ತೋಮವನ್ನೇ ಸೃಷ್ಟಿಸಬಹುದು. ಸರಕಾರದ ಜೊತೆ ಕಾರ್ಮಿಕರು ಸಹಕರಿಸುವ ಅನೇಕ ಹೊಸ ಕ್ಷೇತ್ರಗಳನ್ನು ನಿರ್ಮಿಸಬಹುದು. ಶ್ರೀ ಜಾರ್ಜ್‌ಫರ್ನಾಂಡಿಸರು ಕೈಗಾರಿಕಾ ಮಂತ್ರಿಗಳಾಗಿದ್ದಾಗ ಒಂದು ಸಮಿತಿಯನ್ನು ರಚಿಸಿದ್ದರು. ವಿಭಿನ್ನ ಕೇಂದ್ರ ಕಾರ್ಮಿಕಸಂಘಟನಾ ಸಂಸ್ಥೆಗಳ ಕಾರ್ಮಿಕ ಸಂಘಟಕರನ್ನೊಳಗೊಂಡಿದ್ದ ಆ ಸಮಿತಿಯು ಹಳ್ಳಿಗಳ ಅಭಿವೃದ್ಧಿಯ ಕಾರ್ಯದಲ್ಲಿ ತಮ್ಮ ಹೊಣೆಗಾರಿಕೆಯನ್ನು ನಿರ್ವಹಿಸುವುದಕ್ಕಾಗಿ, ಕಾರ್ಮಿಕರನ್ನು ಮತ್ತು ಉದ್ದಿಮೆಗಳನ್ನು ಈ ಕಾರ್ಯಗಳಲ್ಲಿ ತೊಡಗಿಸುವ ಸಲುವಾಗಿ ಸಲಹೆಗಳನ್ನು ರೂಪಿಸಲಿತ್ತು. ಸಮಿತಿಯು, ಕಾರ್ಮಿಕ ಸಂಘಗಳಲ್ಲೇ ಆಂತರಿಕ ಮತಭೇದಗಳಿದ್ದರೂ ಸಹ ಸರ್ವಾನುಮತದ ಶಿಫಾರಸುಗಳನ್ನು ಸಲ್ಲಿಸಿತ್ತು. ಈ ವರದಿ ಈಗ ಕೈಗಾರಿಕಾ ಸಚಿವಾಲಯದ ದಫ್ತರಗಳಲ್ಲಿಲ್ಲೋ ಹೂದುಗಿಹೋಗಿದೆ. ಈ ವರದಿಯು—ಕಾರ್ಮಿಕ ಸಂಘಗಳನ್ನು ಸರಿಯಾದ ರೀತಿಯಲ್ಲಿ ಸಂಪರ್ಕಿಸಿದರೆ, ಅವು ಸಹಕಾರ ನೀಡಬಹುದು ಮತ್ತು ನೀಡುತ್ತಾರೆ ಎನ್ನುವುದನ್ನು ತೋರಿಸುತ್ತದೆ.

ಈ "ಅಭಿವೃದ್ಧಿ"ಯ ಸಂದರ್ಭದಲ್ಲಿ ಪಟ್ಟಭದ್ರ ಹಿತಾಸಕ್ತಿಗಳು ಮತ್ತೆ ಮತ್ತೆ ಕೆಲವು ಅಸಂಗತ ವಾದಗಳನ್ನು ಎತ್ತುತ್ತವೆ. ಸಂಪರ್ಕ ಮಾಧ್ಯಮದ ಪಾತ್ರ ಎಂಥದ್ದೆಂದರೆ, ಜರೂರಿನ ಮಹತ್ವದ ವಿಷಯಗಳ ಗಂಭೀರ ಸಾರ್ವಜನಿಕ ಚರ್ಚೆಗೆ ಧಕ್ಕೆ ತರುತ್ತಾ ಇಂಥ ಅಸಂಗತ ವಾದಗಳನ್ನು ದೇಶಾದ್ಯಂತ ಬಜಾಯಿಸಲಾಗುತ್ತದೆ. ಅಭಿವೃದ್ಧಿಯನ್ನು ಉತ್ತೇಜಿಸುವಂಥ ಒಂದು ಸುವಿಚಾರದ—ಸಂಬಳ, ಆದಾಯ ಮತ್ತು ಬೆಲೆ ನೀತಿಯ ಅಗತ್ಯವು ಗಂಭೀರ ಸಾರ್ವಜನಿಕ ಚರ್ಚೆ ಬಯಸುವ ವಿಷಯಗಳಲ್ಲೊಂದು. ಆದರೆ, ಎಲ್ಲ ಕಡೆಯೂ ವಾದಿಸಲಾಗುತ್ತಿರುವ ಸಂಗತಿಯೇ ಬೇರೆಯದು. ಅಪಾರ ದಾರಿದ್ರ್ಯದ ನಡುವೆ ಸಂಘಟಿತ ಕಾರ್ಮಿಕರ ಕೆಲವು ವಿಭಾಗಗಳನ್ನೊಳಗೊಂಡಂತಹ ಒಂದು "ದೊಡ್ಡ ಸಂಬಳದ ದ್ವೀಪ"ದ ತಥಾಕಥಿತ ಅಸ್ತಿತ್ವ ಮತ್ತು ಈ ಸಂಘಟಿತ ಕಾರ್ಮಿಕರು ದೇಶವನ್ನು ಬೆದರಿಸಿಟ್ಟುಕೊಂಡು ದೋಚುತ್ತಿದ್ದಾರೆ, ದೇಶವನ್ನು ವ್ಯವಸ್ಥೆಯ ಧೀರ ಸರದಾರರು ರಕ್ಷಿಸಬೇಕು ಎನ್ನುವುದು. 1979ರಲ್ಲಿ ಅಜಿತ್‌ಭಗತ್ ಅವರ ನೆನಪಿನ ಮೂರನೆ ಭಾಷಣದಲ್ಲಿ ನಮ್ಮ ಗೆಳೆಯ ಭಗರಾಂ ತುಲ್ಪುಲೆ ಈ ವಾದವನ್ನು ಚಿಂದಿ ಚಿಂದಿಮಾಡಿ ಆದರ ಮೂರ್ಖತನವನ್ನು ತೋರಿಸಿ ಕೊಟ್ಟಿದ್ದಾರೆ. ಆದರೂ, ಕೆಲವು ವಲಯಗಳಲ್ಲಿ ಈ ದೊಡ್ಡ ಸಂಬಳದ ದ್ವೀಪದ

ಬಗೆಗೆ ಸ್ಥಿರವಾಗಿ ಇರುವ ಭ್ರಾಂತಿಯನ್ನು ಕಳೆಯಲಾದರೂ, ವೇತನದ ಪ್ರಶ್ನೆಯ ಕೆಲವು ಮುಖ್ಯ ಅಂಶಗಳ ಬಗೆಗೆ ಒಂದೆರಡು ಮಾತುಗಳನ್ನು ಪರಿಶೀಲಿಸುವುದು ಅಗತ್ಯ.

ನ್ಯಾಯಂದಜೊತೆಗೆ ಅಭಿವೃದ್ಧಿಗೆ ಸಂಬಂಧಿಸಿದಂತೆ ಒಂದು ಸಾರ್ಥಕವಾದ ವೇತನ ನೀತಿಯನ್ನು ರೂಪಿಸುವಲ್ಲಿ ಮತ್ತು ಈಗಾಗಲೇ ರೂಪಿತವಾಗಿರುವ ಇಂತಹ ನೀತಿ ಯನ್ನು ಆಚರಣೆಗೆ ತರುವಲ್ಲಿ ಈ ಸರಕಾರ ಏನನ್ನೂ ಮಾಡಿಲ್ಲ. ಒಂದು ರಾಷ್ಟ್ರೀಯ ಕನಿಷ್ಠ ವೇತನವನ್ನು ನಿರ್ಧರಿಸಲಾಗಿಲ್ಲ, ಕನಿಷ್ಠ ಕೂಲಿಕಾಯಿದೆಯನ್ವಯ ಪರಿಶೀಲನ ಮತ್ತು ಕಾರ್ಯಾನ್ವಯವು ಅಸಮರ್ಪಕವಾಗಿದೆ. ಉದಾಹರಣೆಗೆ, ರಭಸದಿಂದ ಹೆಚ್ಚುತ್ತಿರುವ ಹಣದುಬ್ಬರದ ಪರಿಸ್ಥಿತಿಯಲ್ಲಿ, ಕಳೆದ ಮೂರು ದಶಕಗಳಲ್ಲಿ ಕೃಷಿಕೂಲಿ ಗಳ ಕನಿಷ್ಠ ಕೂಲಿ ದರವನ್ನು ಮೂರು ಅಥವಾ ನಾಲ್ಕು ಬಾರಿಗಿಂತ ಹೆಚ್ಚು ಸಲ ಪುನರ್ವಿಮರ್ಶೆ ಮಾಡಲಾಗಿಲ್ಲ. 1957ರಲ್ಲಿ ನಡೆದ ಶ್ರಮಜೀವಿಗಳ ಪಕ್ಷೀಯ ಸಮ್ಮೇಳನ ದಲ್ಲಿ ಎಲ್ಲರೂ ಒಪ್ಪಿಕೊಂಡಂತಹ ಅವಶ್ಯಕತೆಗಳನ್ನಾಧರಿಸಿದಂತೆ ವೇತನ ನಿರ್ಣಯದ ಕ್ರಮವನ್ನು ಮೋಸದ ವಾದಗಳನ್ನು ಮುಂದೂಡಿ ಗಾಳಿಗೆ ತೂರಲಾಗಿದೆ. ಕೂಲಿ ನೌಕರಿಯ ವಿಶಾಲಭಾಗಗಳಲ್ಲಿರುವ ದುಬಾರಿ ಬೆಲೆ ಸಹಾಯ (ಡಿ.ಎ.)ದ ಸ್ಥಿರವಾದ ದರವು ವೇತನ ವ್ಯತ್ಯಾಸಗಳನ್ನು ಮತ್ತು ಕೂಲಿಗಳನ್ನು ವಿಕೃತಗೊಳಿಸಿದೆ. ಆದುದರಿಂದ ನೈಪುಣ್ಯದ ಅಪಮೌಲ್ಯವಾಗುತ್ತಿದೆ. ದುಬಾರಿ ಖರ್ಚಿಗೆ ಕಾರಣವಾಗುವಂತಹ ಉದ್ಯಮ ಪಂಚಾಯಿತಿ ಮತ್ತು ಕಾರ್ಮಿಕ ನ್ಯಾಯಾಲಯಗಳ ನಡಾವಳಿಗಳು ನಿಧಾನ ದ್ರೋಹ ಮತ್ತು ದೃಢವಾದ ಸರಕಾರೀ ನೀತಿಯ ಗೈರುಹಾಜರಿಯಲ್ಲಿ ಮೇಲಿನ ಕೋರ್ಟುಗಳ ಮಧ್ಯಪ್ರವೇಶ ಮತ್ತು ನ್ಯಾಯಾಧೀಶರ ವೈಯಕ್ತಿಕ ಖಯಾಲಿಗಳಿಗೆ ಒಳಪಡುವಂಥವು. ಐ.ಎಲ್.ಓ. ರೂಢಿಯನ್ವಯ ರೈಲ್ವೆ ಮತ್ತು ಅಪ್ಪಟ ಉದ್ಯಮ ಗಳಂತೆ ಎಲ್ಲ ವಿಭಾಗಳಿಗೂ ಸಹ ಸಂಘಟನೆಯ ಹಕ್ಕು ಮತ್ತು ಸಾಮುದಾಯಿಕ ಚೌಕಾ ಶಿಯ ಹಕ್ಕು ಇದ್ದರೂ ಸಹ ಸರಕಾರಿ ಮತ್ತು ಅರೆ ಸರಕಾರಿ ಉದ್ಯಮಗಳ ನೌಕರರಿಗೆ ವೇತನದರ ನಿಷ್ಕರ್ಷೆಯನ್ನು ಏಕ ಪಕ್ಷೀಯವಾಗಿ ಮಾಡಲಾಗುತ್ತಿದೆ. ಈ ಸಂದರ್ಭದಲ್ಲಿ "ದೊಡ್ಡ ಸಂಬಳದ ದ್ವೀಪ" ದಂತ ಮಾತುಗಳು ಮುಖ್ಯವಾಗಿ, ಮೇಲೆ ಹೇಳಿದ ಗಹನವಾದ ಸಂಗತಿಗಳು ಬದಿಗೆ ಸರಿಯುತ್ತಿರುವುದು ವಿಸ್ಮಯಕಾರಿಯಾದುದು. ಈ ದಾರಿ ತಪ್ಪಿಸುವ ಪ್ರಚಾರವು ಎದ್ದುಕಾಣುವಂತೆಯೇ ಸಂಘಟಿತ ಕಾರ್ಮಿಕರು ಮತ್ತು ಇತರ ಬಡಜನತೆಯ ನಡುವೆ ಅಂತರ ಬೆಳೆಸುವ ಕುತಂತ್ರ.

ಹೇಗಿದ್ದರೂ ನಾವು ಕೂಲಿದರವು ಮಾರುಕಟ್ಟೆಯ ತಿರುವು ಮುರುವುಗಳ ಮತ್ತು ಕೆಲಬಾರಿ ಸಮುದಾಯಿಕ ಚೌಕಾಸಿಯ ಮೇಲೆ ಆಧರಿಸಿರುವಂತಹ ಬಂಡವಾಳ ಶಾಹಿ ಅಭಿವೃದ್ಧಿಯ ಘಟ್ಟದಲ್ಲಿ ನಡೆಯುತ್ತಿದ್ದೇವೆ. ಕೆಲವು ಕಡೆ ಹೆಚ್ಚಿನ ಸಂಬಳ ಮತ್ತು ಸಾಮಾನ್ಯವಾಗಿ ಕಡಿಮೆಸಂಬಳ ಇರುವಂಥ ಪರಿಸ್ಥಿತಿಯ, ಕೆಲವು ಉದ್ಯಮ ಗಳಲ್ಲಿನ ನೌಕರರು ತಮ್ಮ ನ್ಯಾಯಯುತವಾದ ಸಾಮುದಾಯಿಕ ಚೌಕಾಶಿಯ ಹಕ್ಕನ್ನು

ಚಲಾಯಿಸುವ ಮೂಲಕ ಹೆಚ್ಚು ಸಂಬಳ ಪಡೆಯುವ, ಮತ್ತು ಇನ್ನೊಂದು ಕಡೆ, ಕೇವಲ ಬೇಡಿಕೆ, ನೀಡಿಕೆ ನಿಯಮದನ್ವಯ ಕಡಿಮೆ ಸಂಬಳವನ್ನು ಪಡೆಯುತ್ತಿರುವುದರಿಂದ ಉಂಟಾಗಿದೆ.—"ದೊಡ್ಡ ಸಂಬಳದ ದ್ವೀಪ" ಇರುವಂಥ ಉದ್ಯಮದಲ್ಲಿ ದೊಡ್ಡ ಸಂಬಳ ಕೊಟ್ಟು ಉದ್ಯಮ ನಡೆಸುವುದು ಸಾಧ್ಯವಿಲ್ಲ ಎನ್ನುವುದಾದರೆ, ಉದ್ಯಮದ ಸಾಮರ್ಥ್ಯವನ್ನು ಅಲಕ್ಷಿಸಿಯೂ ಕಡಿಮೆ ಸಂಬಳ ಕೊಡುವಂತ ಕಡೆಗಳಲ್ಲಿ ಗೌರವಾರ್ಹ ಸಂಬಳಗಳನ್ನು ಕೊಡಲು ಆಗುವುದೇನು? ಈ "ರಾಜ ಬಿದ್ದರೆ ನಾನು ಗೆದ್ದೆ, ರಾಣಿ ಬಿದ್ದರೆ ನೀನು ಸೋತೆ" ಎನ್ನುವ ತರ್ಕವನ್ನು ಪಂಡಿತವರ್ಯರು ಉಪದೇಶಿಸಿದರೂ, ನಿವೃತ್ತ ಅಧಿಕಾರಿಗಳು ಉದ್ಗರಿಸಿದರೂ ಸಹ ಅರ್ಥಮಾಡಿಕೊಳ್ಳುವುದು ಸಾಧ್ಯವಿಲ್ಲ. ಅಲ್ಲದೆ, ಹೆಚ್ಚಿನ ಸಂಬಳ ದೊರಕುತ್ತಿರುವುದು ಹೆಚ್ಚಿನ ಉತ್ಪಾದನೆಯ ಉದ್ಯಮಗಳಲ್ಲಿ. ಇಲ್ಲಿನ ಉತ್ಪಾದನಾ ಸಾಮರ್ಥ್ಯವನ್ನು, ನೌಕರಿ ನಿರ್ಮಾಣದ ಸಾಮರ್ಥ್ಯವನ್ನು ಮತ್ತು ನೌಕರರ ಹೆಚ್ಚಿನ ಕೌಶಲ್ಯ ಮತ್ತು ಶ್ರಮವನ್ನು ಬಲಿಕೊಟ್ಟು ಸಾಧಿಸಲಾಗಿದೆ. ಉತ್ಪನ್ನಕ್ಕೆ ಸೇರಿಸಿದ ಮೌಲ್ಯದಲ್ಲಿ ಕೆಲಸಗಾರನಿಗೆ ಕೂಲಿಯ ರೂಪದಲ್ಲಿ ದೊರಕುವ ಶೇಕಡಾ ಭಾಗವು (1951–53ರಿಂದ 1973–75ರವರೆಗಿನ) ಎರಡು ದಶಕಗಳಲ್ಲಿ ಶೇ. 49.9 ರಿಂದ ಶೇ 32.5ಕ್ಕೆ ಕುಸಿದಿದೆ ಎನ್ನುವುದು ವಾಸ್ತವ ಸಂಗತಿ. ಕೆಲಸಗಾರರ ಕೂಲಿ ದರದ ಏರಿಕೆಯು ತಲಾ ರಾಷ್ಟ್ರೀಯ ವರಮಾನದ ಏರಿಕೆಗೆ ಅನುಗುಣವಾಗಿ ಸಹ ಇಲ್ಲ. ತಲಾ ರಾಷ್ಟ್ರೀಯ ವರಮಾನದ ಏರಿಕೆಯಾದರೋ ಕ್ಷುಲ್ಲಕವಾದದ್ದು. 1952 ರಿಂದ ಇಪ್ಪತ್ತು ವರ್ಷಗಳವರೆಗಿನ ಅವಧಿಯಲ್ಲಿ ತಲಾರಾಷ್ಟ್ರೀಯ ಆದಾಯ ಶೇ. 1.4ರ ಹೆಚ್ಚಳಕ್ಕೆ ಹೋಲಿಸಿದರೆ ಕೂಲಿ ಹೆಚ್ಚಳದ ವಾರ್ಷಿಕ ಚಕ್ರ ದರ ಶೇ 1.1 ಮಾತ್ರ.

ಅಲ್ಲದೆ, ಈ ಕೂಲಿಯ ಪ್ರಶ್ನೆಯನ್ನು ಬೆಲೆ ಮತ್ತು ವೇತನೇತರ ಆದಾಯ ಎನ್ನುವ ತ್ರಿಕೋನದ ಇನ್ನೆರಡು ಬಾಹುಗಳನ್ನು ಬಿಟ್ಟು ಪರಿಶೀಲಿಸಲಾಗದು. ಇಲ್ಲಿಯವರೆಗೂ ಕೇಂದ್ರ ಸರಕಾರವು ವೇತನೇತರ ವರಮಾನಗಳ ಮೇಲೆ ಮಿತಿ ಹೇರುವ ಪ್ರಶ್ನೆಯನ್ನು ಎದುರಿಸುವುದನ್ನು ನಿರಂತರವಾಗಿ ತಿರಸ್ಕರಿಸಿದೆ ; ಹಾಗೆಯೇ ಅಗತ್ಯ ಆಧಾರಿತ ಕನಿಷ್ಠ ಕೂಲಿಯ ಮಟ್ಟವನ್ನು ವಿಧಿಸಲೂ ಸಹ ಒಪ್ಪಿಲ್ಲ, ಮತ್ತು ಬೆಲೆ ಏರಿಕೆಯನ್ನು ತಡೆಯುವಲ್ಲಿ ನಿರ್ಣಾಯಕ ವೈಫಲ್ಯವನ್ನು ಸಾಧಿಸಿದೆ. ರಾಷ್ಟ್ರೀಯ ಉತ್ಪನ್ನವನ್ನು ಒಂದು ಕಡೆ ಕಾರ್ಮಿಕ ವರ್ಗ ಮತ್ತು ರೈತವರ್ಗ ಮತ್ತು ಇನ್ನೊಂದು ಕಡೆ ಬಂಡವಾಳವರ್ಗ, ವಣಿಕವರ್ಗ ಮತ್ತು ಭೂಮಾಲಿಕ ವರ್ಗಗಳ ನಡುವೆ ಪುನರ್ವಿತರಣೆ ಮಾಡುವ ಪ್ರಶ್ನೆಯನ್ನು ಸರಕಾರ ಎದುರಿಸದ ಹೊರತು ಕಾರ್ಮಿಕ ಸಂಘಟನೆಗಳು ಹೆಚ್ಚಿನ ಸಂಬಳದ ಪ್ರಶ್ನೆಯನ್ನು ಮಾತ್ರ ಚರ್ಚಿಸುವ ಕಾಲ ಬರುವುದಿಲ್ಲ—ಬೆಲೆಗಳು ದಿನದಿಂದ ದಿನಕ್ಕೆ ಏರುತ್ತಲೇ ಇವೆ ಮತ್ತು ತಥಾಕಥಿತ "ದೊಡ್ಡ ಸಂಬಳದ ದ್ವೀಪ"ಗಳು ಹುಟ್ಟಿಕೊಂಡಿರುವುದು ಜೀವನ ವೆಚ್ಚದ ಸೂಚಿಗೆ ಸಂಬಂಧಿಸಿದ ಸಂಕಷ್ಟಭತ್ಯೆಯ ಹೆಚ್ಚಳದ ಪರಿಣಾಮವಾಗಿ. ಸಾರ್ವಜನಿಕ ಮತ್ತು ಖಾಸಗೀ ಕ್ಷೇತ್ರಗಳ ಒಟ್ಟು 2000ಲಕ್ಷ ಕೂಲಿ

ಮತ್ತು ಸಂಬಳ ದಾರರಲ್ಲಿ ಕೇವಲ 6 ಲಕ್ಷ ಅಥವಾ ಅದಕ್ಕೂ ಕಡಿಮೆ ಮಂದಿ ಮಾತ್ರ ಇಂಥ "ದೊಡ್ಡ ಸಂಬಳದ ದ್ವೀಪಕ್ಕೆ" ಸೇರಿದವರು ; ಕೂಲಿಯ ಅಂಶವು ಉತ್ಪಾದನೆ ಮತ್ತು ಸೇವೆಯ ವೆಚ್ಚದ ಶೇ. 15ರಿಂದ 20ರಷ್ಟು ಮಾತ್ರ, ಆದ್ದರಿಂದ, ಈ "ದೊಡ್ಡ ಸಂಬಳ"ವು ಸಾಮಾನ್ಯ ಬೆಲೆ ಏರಿಕೆಯ ಮೇಲೆ ಯಾವ ಮಹತ್ವದ ಪರಿಣಾಮವನ್ನೂ ಮಾಡುವಂಥದಲ್ಲ, ದೇಶದ ಆರ್ಥಿಕತೆಯ ಮೇಲೆ ಅದು ಹೊರ ಲಾರದ ಹೊರೆಯೂ ಅಲ್ಲ.

ಒಂದು ಕಿಲೋ ಸಕ್ಕರೆಯ ಒಟ್ಟು ಕೂಲಿ ಅಥವಾ ವೇತನದ ಅಂಶವು ಸಕ್ಕರೆ ಯನ್ನು 3 ರೂಪಾಯಿಗೇ ಮಾರಲಿ, ಹತ್ತು ರೂಪಾಯಿಗೇ ಮಾರಲಿ, ಮೂವತ್ತು ಪೈಸೆಗಳಷ್ಟು ಮಾತ್ರ. ಇಂಥ ಉದಾಹರಣೆಗಳನ್ನು ಎಷ್ಟು ಬೇಕಾದರೂ ಕೊಡ ಬಹುದು. "ದೊಡ್ಡ ಸಂಬಳದ ದ್ವೀಪ"ದ ವಿರುದ್ಧ ಎತ್ತಲಾಗುತ್ತಿರುವ ಈ ದೊಡ್ಡ ದನಿಯ ಮಾತು ಸಾಮಾನ್ಯವಾದ ಕೂಲಿ ಹೆಚ್ಚಳದ ಕೋರಿಕೆಗೆ ತಡೆಯಾಗಿ ಬಲಿ ಪಶುವನ್ನು, ಸೃಷ್ಟಿಸಲು ಉಂಟಾದದ್ದು. ಈ ಇಡೀ ಆಟವನ್ನೂ ಆರಂಭಿಸಿದ್ದು ಕುಖ್ಯಾತ ಭೂತಲಿಂಗಮ್ ಸಮಿತಿಯ ಅಧಿಕೃತ ವರದಿ. ಈ ವರದಿ ಒಂದು ರೀತಿ ಯಲ್ಲಿ ವೇತನ ಸ್ತಂಭನವನ್ನು ಸಲಹೆ ಮಾಡಿತು. ಬೆಲೆ ಏರಿಕೆಯಮೇಲೆ ಅಥವಾ ವೇತನೇತರ ಆದಾಯದಮೇಲೆ ಯಾವ ನಿಜವಾದ ತಡೆಯನ್ನು ಸೂಚಿಸಲಿಲ್ಲ. ಇದು ಕೆಲವರು ಹೇಳುವಂತೆ ಆಳುವವರನ್ನು ಸರಿದಾರಿಗೆ ಹಚ್ಚುವ ಸಮಸ್ಯೆಯಲ್ಲ. 'ಉಳ್ಳ ವರ" ಹಿತದ ಪರ ಅಥವಾ ಇಲ್ಲದವರ ಹಿತದ ಪರವಾಗಿ ಕೆಲಸಮಾಡುವ ಪ್ರಶ್ನೆ

ಆಳುವವರ್ಗದ ಮತ್ತು ಅವರ ಸರಕಾರದ ಮಂಜಿಕಾದು ತಥಾಕಥಿತ ಅಭಿವೃದ್ಧಿಯ ಅಥವಾ ವೇತನದ ಪ್ರಶ್ನೆಯ ಬಗ್ಗೆ ಬಿಡಿ ಬಿಡಿಯಾಗಿ ಚರ್ಚಿಸಲು ಹೆಚ್. ಎಂ. ಎಸ್. ನಿರಾಕರಿಸಬೇಕು. ಬದಲಿಗೆ ಅಭಿವೃದ್ಧಿಯ ಸಮಸ್ಯೆಯ ಎಲ್ಲ ಶ್ರೇಣಿಗಳನ್ನೂ ಒಳ ಗೊಂಡಂತಹ ಒಂದು ಸಮಗ್ರವಾದ ಪರ್ಯಾಯದ ಬಗೆಗೆ ಅರ್ಥಪೂರ್ಣ ಚರ್ಚೆಗೆ ಆಹ್ವಾನ ಕೊಡಬೇಕು. ಯಾರ ಒಳಿತಿಗಾಗಿ ಅಭಿವೃದ್ಧಿ ಎನ್ನುವ ಕೇಂದ್ರ ಪಶ್ನೆ ಎನ್ನೂಳಗೊಂಡ ಪ್ರವೇಶಿಕೆಯಿಂದ ಮತ್ತು ಅಂಥ ಪ್ರವೇಶಿಕೆಯ ಅಂಗವಾಗಿ ಮಾತ್ರ ವೇತನ, ಬೆಲೆ, ವೇತನೇತರ ಆದಾಯದಂತಹ ಪ್ರಶ್ನೆಯನ್ನು ಚರ್ಚಿಸಬಹುದು. ಅಭಿವೃದ್ಧಿಗೆ ಸಂಬಂಧಿಸಿದಂತೆ ಸರಕಾರ ಮುಕ್ತ ಮಾರುಕಟ್ಟೆ ಧೋರಣೆಯನ್ನು, ವೇತನಕ್ಕೆ ಸಂಬಂಧಿಸಿದಂತೆ ನಿಯಂತ್ರಣದ ಧೋರಣೆಯನ್ನು ಅನುಸರಿಸಲು ಇಚ್ಛಿ ಸೀತೆಂಬುದು ನಿಜ.

ತನ್ನ ಹೆಸರಿಗೆ ತಕ್ಕ ಯಾವ ಕಾರ್ಮಿಕ ಸಂಘಟನೆಯೂ ಈಗಿನ ಪರಿಸ್ಥಿತಿಯಲ್ಲಿ ತನ್ನ ವಿರೋಧವನ್ನು ಬಿಟ್ಟು, ನಿಜವಾದ ಸಮಸ್ಯೆಗಳಿಂದ ವಿಮುಖಗೊಳಿಸುವಂತಹ ವಿಚಾರಗಳನ್ನು ಚರ್ಚಿಸಲೂ ಆ ಬೋನಿನೊಳಕ್ಕೆ ಪ್ರವೇಶಿಸಲಾರದು.